# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕ್ಲಸ್ಟರ್ ಮಾದರಿಯಲ್ಲಿ ಮೀನುಗಾರಿಕೆ ಅಭಿವೃದ್ಧಿಯನ್ನು ಕೈಗೊಳ್ಳುವ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ:- ಪತ್ರ ಸಂಖ್ಯೆ: ಮೀನಿ/41/ಪಂವಾಯೋ(1)/2016,
ದಿನಾಂಕ: 26-05-2016.

******

**ಪ್ರಸ್ತಾವನೆ:**

ಮೇಲೆ ಓದಲಾದ ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರ ಪತ್ರದಲ್ಲಿ, ಕ್ಲಸ್ಟರ್ ಮಾದರಿಯಲ್ಲಿ ಮೀನುಗಾರಿಕೆ ಅಭಿವೃದ್ಧಿಯನ್ನು ಕೈಗೊಳ್ಳಲು 2016-17ನೇ ಸಾಲಿನ ಆಯವ್ಯಯದಲ್ಲಿ ರೂ.50.00 ಲಕ್ಷ ಅನುದಾನ ಒದಗಿಸಲಾಗಿದೆ. ಸದರಿ ಯೋಜನೆಯಡಿ ಕೆಳಕಂಡ ಜಂಟಿ ತಾಲ್ಲೂಕುಗಳನ್ನು ಯೋಜನೆಯ ಅನುಷ್ಠಾನಕ್ಕಾಗಿ ಆಯ್ಕೆ ಮಾಡಲಾಗಿದೆ.

| ಕ್ರಮ ಸಂಖ್ಯೆ | ವಲಯ | ಜಿಲ್ಲೆ | ಜಂಟಿ ತಾಲ್ಲೂಕುಗಳು |
|---|---|---|---|
| 1) | ಮೈಸೂರು | ಮೈಸೂರು | ನಂಜನಗೂಡು ಮತ್ತು ಟಿ.ನರಸೀಪುರ |
| 2) | ಶಿವಮೊಗ್ಗ | ದಾವಣಗೆರೆ | ದಾವಣಗೆರೆ ಮತ್ತು ಹರಿಹರ |
| 3) | ಶಿವಮೊಗ್ಗ | ಶಿವಮೊಗ್ಗ | ಶಿವಮೊಗ್ಗ ಮತ್ತು ಭದ್ರಾವತಿ |
| 4) | ಬಳ್ಳಾರಿ | ಬಳ್ಳಾರಿ | ಬಳ್ಳಾರಿ ಮತ್ತು ಸಿರುಗುಪ್ಪ |
| 5) | ಬೆಳಗಾವಿ | ಬಾಗಲಕೋಟೆ | ಬಿಳಗಿ ಮತ್ತು ಜಮಖಂಡಿ |
| 6) | ಬೆಂಗಳೂರು | ರಾಮನಗರ | ಚನ್ನಪಟ್ಟಣ ಮತ್ತು ಕನಕಪುರ |
| 7) | ಬಳ್ಳಾರಿ | ಯಾದಗಿರಿ | ಸುರಪುರ ಮತ್ತು ಶಾಹಪುರ |

ಮೇಲಿನ 7 ಜಂಟಿ ತಾಲ್ಲೂಕುಗಳನ್ನು ಕ್ಲಸ್ಟರ್ ಎಂದು ಪರಿಗಣಿಸಿ ಸಮಗ್ರವಾಗಿ ಜಲಕೃಷಿಯನ್ನು ಅಭಿವೃದ್ಧಿಪಡಿಸಲಾಗುವುದೆಂದು, ಸದರಿ ಯೋಜನೆಯಡಿ 4 ಉಪ ಘಟಕಗಳಿವೆ ಎಂದು ತಿಳಿಸುತ್ತಾ, ಸದರಿ ಉಪ ಘಟಕಗಳಡಿ ನೀಡಲಾಗುವ ಸಹಾಯಧನದ ವಿವರ ಹಾಗೂ ಅನುಮೋದಿತ ಅನುದಾನದ ವಿವರಗಳು ಈ ಕೆಳಗಿನಂತೆ ನೀಡಿರುತ್ತಾರೆ.

| ಕ್ರಮ ಸಂಖ್ಯೆ | | ಉಪ ಘಟಕಗಳು | ಘಟಕ ವೆಚ್ಚ ಹಾಗೂ ಸಹಾಯಧನ ವಿವರ |
|---|---|---|---|
| 1) | **ಮೀನುಮರಿ ಪಾಲನೆಗೆ ಸಹಾಯ** | | |
| | ಅ) | ನರ್ಸರಿ ಕೊಳಗಳ ನಿರ್ಮಾಣ including bund, compacting, water supply inlet / outlet etc. | ಘಟಕ ವೆಚ್ಚ ರೂ.6.00 ಲಕ್ಷ / ಹೆಕ್ಟೇರ್ ಸಹಾಯಧನ: 50% |

-2-

| | | | |
|---|---|---|---|
| | ಆ) | ಮೀನುಮರಿ ಪಾಲನೆಗೆ ಹೂಡಿಕೆ ವೆಚ್ಚ (ಮೀನುಮರಿ, ಆಹಾರ, ಗೊಬ್ಬರ, ಎಳೆಬಲೆ, ಪ್ಯಾಕಿಂಗ್ ವೆಚ್ಚ ಇತ್ಯಾದಿ ಒಳಗೊಂಡಂತೆ) | ಘಟಕ ವೆಚ್ಚ ರೂ.2.00 ಲಕ್ಷ / ಹೆಕ್ಟೇರ್ ಸಹಾಯಧನ: 50% |
| | ಇ) | ಹಾಲಿ ಇರುವ ಮೀನುಮರಿ ಪಾಲನಾ ಕೊಳ/ಕೇಂದ್ರಕ್ಕೆ ಮೂಲಭೂತ ಸೌಲಭ್ಯ (ಕೊಳ ನವೀಕರಣ, ನೀರು ಸರಬರಾಜು, ಕಂಡಿಷನಿಂಗ್ ಕೊಳ, ಬಲೆ, ಪ್ಯಾಕಿಂಗ್ ವ್ಯವಸ್ಥೆ ಇತ್ಯಾದಿ) | ಘಟಕ ವೆಚ್ಚ ರೂ.2.00 ಲಕ್ಷ / ಹೆಕ್ಟೇರ್ ಸಹಾಯಧನ: 50% |
| 2) | ಮೀನು ಉತ್ಪಾದನೆಗೆ ಸಹಾಯ | | |
| | ಅ) | ಕೊಳಗಳ ನಿರ್ಮಾಣ including bund, compacting, water inlet / outlet etc. | ಘಟಕ ವೆಚ್ಚ ರೂ.5.00 ಲಕ್ಷ / ಹೆಕ್ಟೇರ್ ಸಹಾಯಧನ: 50% |
| | ಆ) | ಮೀನು ಉತ್ಪಾದನೆಗೆ ಹೂಡಿಕೆ ವೆಚ್ಚ ಮೀನುಮರಿ, ಆಹಾರ, ಗೊಬ್ಬರ, ಎಳೆಬಲೆ ಇತ್ಯಾದಿ ಸೇರಿ | ಘಟಕ ವೆಚ್ಚ ರೂ.2.00 ಲಕ್ಷ / ಹೆಕ್ಟೇರ್ ಸಹಾಯಧನ: 50% |
| 3) | ಶೀತಲೀಕರಣ ಘಟಕ ಸ್ಥಾಪನೆ, ಮಂಜುಗಡ್ಡೆ ಸ್ಥಾವರ ನಿರ್ಮಾಣ, ಶಾಖನಿರೋಧಕ ವಾಹನಗಳನ್ನು ಒದಗಿಸುವುದು, ಸಂಚಾರಿ ಮಾರುಕಟ್ಟೆ / ಮಾರುಕಟ್ಟೆಗಳ ನಿರ್ಮಾಣ ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು. | | ರೂ.30.00 ಲಕ್ಷ ಪ್ರತಿ ಕ್ಲಸ್ಟರ್‌ಗೆ ಸಹಾಯಧನ: 50% |
| 4) | ಸಾಮರ್ಥ್ಯ ವರ್ಧನೆ-ಕೃಷಿಕರಿಗೆ ತರಬೇತಿ ಮತ್ತು ವಿಸ್ತರಣಾ ಸಾಮಗ್ರಿಗಳು | | ಪ್ರತಿ ದಿನಕ್ಕೆ ಪ್ರತಿ ಕೃಷಿಕರಿಗೆ ರೂ.600.00 ನಂತೆ 2 ದಿನಗಳ ತರಬೇತಿ (100%) |

ಯೋಜನೆಯನ್ನು ಮೀನುಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುವುದೆಂದು ತಿಳಿಸುತ್ತಾ, ಕ್ಲಸ್ಟರ್ ಮಾದರಿಯಲ್ಲಿ 7 ಜಂಟಿ ತಾಲ್ಲೂಕುಗಳಲ್ಲಿ ಸಮಗ್ರವಾಗಿ ಮತ್ತು ಸುಸಂಘಟಿತ ರೀತಿಯಲ್ಲಿ ಮೀನು ಕೃಷಿಯ ಅಭಿವೃದ್ಧಿಯನ್ನು ಇಲಾಖಾ ಷರತ್ತು ಮತ್ತು ನಿಬಂಧನೆಗಳ ಪ್ರಕಾರ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ 108 ಮೀಇಯೋ 2016, ಬೆಂಗಳೂರು ದಿನಾಂಕ: 03-09-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕ್ಲಸ್ಟರ್ ಮಾದರಿಯಲ್ಲಿ ಮೀನುಗಾರಿಕೆ ಅಭಿವೃದ್ಧಿಯನ್ನು ಕೈಗೊಳ್ಳುವ ಹೊಸ ಯೋಜನೆಯನ್ನು ಈ ಆದೇಶದ ಅನುಬಂಧದಲ್ಲಿ ನಮೂದಿಸಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು 2016-17ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2405-00-101-0-68 ರಡಿ ಒದಗಿಸಿರುವ ರೂ.50.00 ಲಕ್ಷ (ಐವತ್ತು ಲಕ್ಷ ರೂಪಾಯಿಗಳು ಮಾತ್ರ)ಗಳಿಂದ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ/35/ಪಿಎಫ್ಒ/2016, ದಿನಾಂಕ: 29-06-2016 ಮತ್ತು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ/424/ವೆಚ್ಚ-4/2016, ದಿನಾಂಕ: 22-08-2016 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

3/9/16

(ರಶ್ಮಿ ಶಿವಶಂಕರ ಮೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

03/09/16

ಇವರಿಗೆ:

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ)(ಇ&ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಜಂಟಿ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6) ಸಂಬಂಧಪಟ್ಟ ಮೀನುಗಾರಿಕೆ ಉಪ ನಿರ್ದೇಶಕರುಗಳಿಗೆ ಮೀನುಗಾರಿಕೆ ನಿರ್ದೇಶಕರ ಮುಖಾಂತರ.
7) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
9) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
10) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಮ್ / ಹೆಚ್ಚುವರಿ ಪ್ರತಿಗಳು.

ಆದೇಶ ಸಂಖ್ಯೆ: ಪಸಂಮೀ 108 ಮೀಇಯೋ 2016, ಬೆಂಗಳೂರು ದಿನಾಂಕ: 03-09-2016 ರ ಅನುಬಂಧ

## ಕ್ಲಸ್ಟರ್ ಮಾದರಿಯಲ್ಲಿ ಮೀನುಗಾರಿಕೆ ಅಭಿವೃದ್ಧಿ ಯೋಜನೆ ಅನುಷ್ಠಾನಕ್ಕಾಗಿ ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು:

1. **ಮೀನುಮರಿ ಪಾಲನೆಗೆ ಸಹಾಯ:**

- ಪ್ರತಿ ಹೆಕ್ಟೇರ್ ಕೊಳ ನಿರ್ಮಾಣಕ್ಕೆ ಗರಿಷ್ಟ ಘಟಕ ವೆಚ್ಚ ರೂ.6.00 ಲಕ್ಷಗಳ ಶೇ.50 ರಷ್ಟು ಗರಿಷ್ಠ ರೂ.3.00 ಲಕ್ಷ / ಹೆಕ್ಟೇರ್ ಸಹಾಯಧನವಾಗಿ ನೀಡತಕ್ಕದ್ದು. ಹೂಡಿಕೆ ವೆಚ್ಚಗಳಿಗೆ ಘಟಕ ವೆಚ್ಚ ರೂ.2.00 ಲಕ್ಷ / ಹೆಕ್ಟೇರ್ ಇದ್ದು ಶೇ.50 ರಷ್ಟು ಗರಿಷ್ಠ ರೂ.1 ಲಕ್ಷ / ಹೆಕ್ಟೇರ್ ಸಹಾಯಧನವಾಗಿ ನೀಡತಕ್ಕದ್ದು.
- ಹಾಲಿ ಇರುವ ಮೀನುಮರಿ ಪಾಲನೆ ಕೊಳಗಳಿಗೆ / ಕೇಂದ್ರಗಳಿಗೆ ಮೂಲಭೂತ ಸೌಲಭ್ಯ ಒದಗಿಸಲು ಘಟಕ ವೆಚ್ಚ ರೂ.2.00 ಲಕ್ಷ / ಹೆಕ್ಟೇರ್‌ಗಳಿಗೆ ಶೇ.50 ರಷ್ಟು ಗರಿಷ್ಠ ರೂ.1.00 ಲಕ್ಷ / ಹೆಕ್ಟೇರ್ ಸಹಾಯಧನವಾಗಿ ನೀಡತಕ್ಕದ್ದು. ಈ ಉಪ ಘಟಕದಡಿ ಕೊಳ ನವೀಕರಣ, ನೀರು ಸರಬರಾಜು, ಕಂಡಿಷನಿಂಗ್ ಕೊಳ, ಬಲೆ, ಪ್ಯಾಕಿಂಗ್ ವ್ಯವಸ್ಥೆ ಇತ್ಯಾದಿಗಳನ್ನು ಕೈಗೊಳ್ಳಲು ಅವಕಾಶ ಮಾಡತಕ್ಕದ್ದು.
- ಮೀನುಮರಿ ಪಾಲನಾ ಕೇಂದ್ರದ ಕೊಳಗಳ ಒಟ್ಟು ವಿಸ್ತೀರ್ಣ ಕನಿಷ್ಠ 2000 ಚ.ಮೀ. ಹಾಗೂ ಪ್ರತಿ ಪಾಲನಾ ಕೊಳದ ವಿಸ್ತೀರ್ಣ ಕನಿಷ್ಠ 600 ಚ.ಮೀ. ಇರತಕ್ಕದ್ದು. ಅಗತ್ಯ ನೀರಿನ ಸೌಕರ್ಯ, ಕಂಡಿಷನಿಂಗ್ ಕೊಳ, ಮೀನುಮರಿ ಪ್ಯಾಕಿಂಗ್ ವ್ಯವಸ್ಥೆ, ಇತ್ಯಾದಿಗಳು ಇರತಕ್ಕದ್ದು.

2. **ಮೀನು ಉತ್ಪಾದನೆಗೆ ಸಹಾಯ:**

- ಪ್ರತಿ ಹೆಕ್ಟೇರ್ ಕೊಳ ನಿರ್ಮಾಣಕ್ಕೆ ಘಟಕ ವೆಚ್ಚ ರೂ.5.00 ಲಕ್ಷಗಳ ಶೇ.50 ರಷ್ಟು ಗರಿಷ್ಠ ರೂ.2.50 ಲಕ್ಷ / ಹೆಕ್ಟೇರ್ ಸಹಾಯಧನವಾಗಿ ನೀಡತಕ್ಕದ್ದು. ಹೂಡಿಕೆ ವೆಚ್ಚಗಳಿಗೆ ಘಟಕ ವೆಚ್ಚ ರೂ.2.00 ಲಕ್ಷ / ಹೆಕ್ಟೇರ್ ಇದ್ದು ಶೇ.50 ರಷ್ಟು ಗರಿಷ್ಠ ರೂ.1.00 ಲಕ್ಷ / ಹೆಕ್ಟೇರ್ ಸಹಾಯಧನವಾಗಿ ನೀಡತಕ್ಕದ್ದು.
- ಮೀನು ಸಾಕಾಣಿಕೆಗೆ ಕೊಳದ ವಿಸ್ತೀರ್ಣ ಕನಿಷ್ಠ 2000 ಚ.ಮೀ ಇರತಕ್ಕದ್ದು ಒಬ್ಬರಿಗೆ ಗರಿಷ್ಠ 5 ಹೆಕ್ಟೇರ್‌ವರೆಗೆ ಕೊಳ ನಿರ್ಮಿಸಲು ನೀಡಬಹುದಾಗಿರುತ್ತದೆ.

3. ಮಾರಾಟ ವ್ಯವಸ್ಥೆಗೆ ಮೂಲಭೂತ ಸೌಕರ್ಯ ಒದಗಿಸುವುದು

ಈ ಯೋಜನೆಯ ಅನುಷ್ಠಾನದ ಪ್ರದೇಶಗಳ ಅಗತ್ಯತೆಯನ್ನು ಗಮನಿಸಿ, ಸರ್ಕಾರಕ್ಕೆ ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸಿ ಮಂಜೂರಾತಿ ಪಡೆಯತಕ್ಕದ್ದು. ಈ ಕಾರ್ಯಕ್ರಮದಡಿ ಶೇ.50 ರಷ್ಟು ಸಹಾಯಧನ ನೀಡತಕ್ಕದ್ದು.

4. ತರಬೇತಿ

- ಮೀನುಮರಿ ಪಾಲನೆ ಮತ್ತು ಮೀನು ಕೃಷಿಯನ್ನು ವೈಜ್ಞಾನಿಕವಾಗಿ ಕೈಗೊಳ್ಳಲು, ಮೀನು ಮಾರಾಟ ಇತ್ಯಾದಿ ವಿಷಯಗಳ ಬಗ್ಗೆ 2 ದಿನಗಳ ತರಬೇತಿ ನೀಡಲು ಅವಕಾಶ ಕಲ್ಪಿಸತಕ್ಕದ್ದು.
- ಪ್ರತಿ ಫಲಾನುಭವಿಗೆ ತರಬೇತಿ ನೀಡಲು ಪ್ರತಿ ದಿನ ರೂ.600-00 ರಂತೆ ವೆಚ್ಚ ಮಾಡಲು ಅವಕಾಶವಿದೆ.
- ತರಬೇತಿ ನಡೆಸಲು ಆಗುವ ವೆಚ್ಚಕ್ಕೆ ಮಂಜೂರಾತಿ ನೀಡುವ ಅಧಿಕಾರವನ್ನು ಆಯಾ ವಲಯದ ಮೀನುಗಾರಿಕೆ ಉಪನಿರ್ದೇಶಕರು ಹೊಂದಿರುತ್ತಾರೆ.

**ಫಲಾನುಭವಿಗಳ ಆಯ್ಕೆ ಮತ್ತು ಸಹಾಯಧನ ಮಂಜೂರು ಮಾಡುವ ವಿಧಾನ:**

- ಸದರಿ ಯೋಜನೆಯಡಿಯಲ್ಲಿ ಸಹಾಯಧನವನ್ನು ಪಡೆಯಲು ಇಚ್ಛಿಸುವ ಫಲಾನುಭವಿಯು ಸಂಬಂಧಪಟ್ಟ ತಾಲ್ಲೂಕಿನ ಇಲಾಖೆಯ ಕಛೇರಿಗೆ ಅರ್ಜಿ, ಗುರುತಿನ ದಾಖಲೆ, ಬ್ಯಾಂಕ್ ಖಾತೆಯ ವಿವರ ಹಾಗೂ ಸೂಕ್ತ ಯೋಜನಾ ವರದಿಯನ್ನು ತಯಾರಿಸಿ ನೀಡತಕ್ಕದ್ದು. ಈ ಯೋಜನಾ ವರದಿಯಲ್ಲಿ ಭೂಮಿಯ ಒಡೆತನದ ದಾಖಲಾತಿ, ಆ ಪ್ರದೇಶದ ಎಸ್.ಆರ್.ನಂತೆ ಅಂದಾಜುಪಟ್ಟಿ, ನೀರಿನ ಸೌಲಭ್ಯ, ಯೋಜನೆಯನ್ನು ಉತ್ತಮವಾಗಿ ಅನುಷ್ಠಾನಗೊಳಿಸಲು ಅರ್ಜಿದಾರರ ಅರ್ಹತೆ, ಹಣದ ಮೂಲ, ಯೋಜನೆಯ ಸಾಮರ್ಥ್ಯ ಮುಂತಾದವುಗಳ ಬಗ್ಗೆ ವಿವರಗಳನ್ನು ಹೊಂದಿರತಕ್ಕದ್ದು. ಈ ಎಲ್ಲಾ ಮಾಹಿತಿಗಳನ್ನು ಒಳಗೊಂಡ ಪ್ರಸ್ತಾವನೆಯನ್ನು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಪರಿಶೀಲಿಸಿ, ಸೂಕ್ತ ಶಿಫಾರಸ್ಸಿನೊಂದಿಗೆ ಆಯಾ ವಲಯದ ಮೀನುಗಾರಿಕೆ ಉಪನಿರ್ದೇಶಕರಿಗೆ ಸಲ್ಲಿಸತಕ್ಕದ್ದು. ಮೀನುಮರಿ ಉತ್ಪಾದನೆಗೆ ಕೊಳ ನಿರ್ಮಾಣದ ಭೂಮಿಯ ಸೂಕ್ತತೆ ಬಗ್ಗೆ ಮೀನುಗಾರಿಕೆ ಇಲಾಖೆಯ ಅಧಿಕಾರಿಯು ಕೊಳ ನಿರ್ಮಾಣವನ್ನು ತೆಗೆದುಕೊಳ್ಳುವ ಮೊದಲೇ ತಪಾಸಣೆ ಮಾಡಿ ಯೋಜನಾ ವರದಿಯೊಂದಿಗೆ ಕಳುಹಿಸತಕ್ಕದ್ದು. ಕೊಳಗಳ ನಿರ್ಮಾಣವನ್ನು ಮೀನುಗಾರಿಕೆ ಉಪನಿರ್ದೇಶಕರು ಅನುಮತಿ ನೀಡಿದ ನಂತರವೇ ಪ್ರಾರಂಭಿಸುವುದು.

- ಯೋಜನೆಯಲ್ಲಿನ ನಿರ್ಮಾಣ ಕಾಮಗಾರಿಗೆ ಸ್ಥಳೀಯ ಎಸ್.ಆರ್. ದರದಲ್ಲಿ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ, ಸರ್ಕಾರಿ ಇಂಜಿನಿಯರ್ ಅಥವಾ ಚಾರ್ಟರ್ಡ್ ಇಂಜಿನಿಯರ್‌ರಿಂದ ದೃಢೀಕರಿಸಿ ಸಲ್ಲಿಸುವುದು. ಎಲ್ಲಾ ಉಪಕರಣ/ವಸ್ತುಗಳನ್ನು ಅಧಿಕೃತ ಸಂಸ್ಥೆಯಿಂದ ಖರೀದಿಸಿದ ಬಗ್ಗೆ ಬಿಲ್‌ಗಳನ್ನು ಸಲ್ಲಿಸಬೇಕು.

- ಹೆಚ್ಚಿನ ಪ್ರಚಾರ ನೀಡಿ ಅರ್ಜಿಗಳನ್ನು ಆಹ್ವಾನಿಸುವುದು. ಅರ್ಹ ಫಲಾನುಭವಿಗಳ ಜೇಷ್ಠತೆ ಆಧಾರದ ಮೇಲೆ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

- ಸಹಾಯಧನವನ್ನು ಎರಡು ಕಂತುಗಳಲ್ಲಿ ಅಂದರೆ ಪ್ರಥಮ ಕಂತು, ಫಲಾನುಭವಿ ಅನುಮೋದನೆಯಾಗಿ ಕನಿಷ್ಟ ಶೇ.50 ರಷ್ಟು ನಿರ್ಮಾಣ ಕಾರ್ಯವಾದ ನಂತರ ಮತ್ತು ಎರಡನೇ ಕಂತು ಕೊಳ ನಿರ್ಮಾಣ ಪೂರ್ಣಗೊಳಿಸಿದ ನಂತರ ಫಲಾನುಭವಿಯ ಬ್ಯಾಂಕ್ ಖಾತೆಗೆ ಪಾವತಿಸುವುದು.

- ಫಲಾನುಭವಿಗಳನ್ನು ಆಯ್ಕೆ ಮಾಡಿ ಅನುಮೋದಿಸುವ ಹಾಗೂ ಸಹಾಯಧನವನ್ನು ಮಂಜೂರು ಮಾಡುವ ಅಧಿಕಾರವನ್ನು ಸಂಬಂಧಿಸಿದ ವಲಯದ ಮೀನುಗಾರಿಕೆ ಉಪ ನಿರ್ದೇಶಕರು ಹೊಂದಿರುತ್ತಾರೆ.

- ಫಲಾನುಭವಿಯು ಇಲಾಖೆಯ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಒಪ್ಪುವುದಾಗಿ ಒಪ್ಪಂದ ಪತ್ರವನ್ನು ಸಲ್ಲಿಸತಕ್ಕದ್ದು. ಫಲಾನುಭವಿಯು ನಿರ್ಮಾಣ ಮಾಡಿದ ಕೊಳವನ್ನು ಮೀನುಮರಿ ಪಾಲನೆಗೆ ಉಪಯೋಗಿಸತಕ್ಕದ್ದು. ಮೀನು ಪಾಲನೆಗೆ ಸಂಬಂಧಪಟ್ಟ ಎಲ್ಲಾ ಮಾಹಿತಿಗಳನ್ನು ತಪಾಸಣೆಗೆ ಸಲ್ಲಿಸತಕ್ಕದ್ದು. ನಿರ್ಮಾಣ ಮಾಡಿದ ಕೊಳದಲ್ಲಿ ಕನಿಷ್ಠ 5 ವರ್ಷಗಳವರೆಗೆ ಮೀನುಮರಿ ಪಾಲನೆಯನ್ನು ತೆಗೆದುಕೊಳ್ಳಬೇಕು. ತಪ್ಪಿದಲ್ಲಿ ಸಹಾಯಧನವನ್ನು ಭೂ ಕಂದಾಯ ಕಾಯಿದೆಯನ್ವಯ ಸರ್ಕಾರಕ್ಕೆ ಬರಬೇಕಾದ ಬಾಕಿ ಎಂದು ವಸೂಲಿ ಮಾಡುವುದು.

- ತಾಲ್ಲೂಕು/ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳು ಫಲಾನುಭವಿಗಳಿಗೆ ಯೋಜನಾ ಅನುಷ್ಠಾನದ ಎಲ್ಲಾ ಹಂತದಲ್ಲಿ ಫಲಾನುಭವಿಗೆ ಸೂಕ್ತ ಸಲಹೆ, ತಾಂತ್ರಿಕ ಸಹಾಯ ಹಾಗೂ ಮಾರ್ಗದರ್ಶನ ನೀಡತಕ್ಕದ್ದು.

3/9/16

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

03/09/16